# ಶಾಲೆಗಳಲ್ಲಿ ಶೌಚಾಲಯ ಏಕಿಲ್ಲ?

> ಸರ್ಕಾರಗಳು ಕೋಟ್ಯಂತರ ರೂಪಾಯಿಗಳನ್ನು ಶಾಲೆಗಳಲ್ಲಿ ಶೌಚಾಲಯ ನಿರ್ಮಿಸಲು ಖರ್ಚು ಮಾಡುತ್ತಿವೆ. ಅಸಮರ್ಪಕ ನಿರ್ವಹಣೆಯಿಂದ ಕೆಲವೇ ದಿನಗಳಲ್ಲಿ ಅವು ಬಳಸಲು ಸಾಧ್ಯವಿಲ್ಲದ ಸ್ಥಿತಿಗೆ ತಲುಪುತ್ತವೆ. ಶೌಚಾಲಯಗಳನ್ನು ನಿರ್ಮಿಸುವುದಕ್ಕೆ ನೀಡುವಷ್ಟೇ ಗಮನವನ್ನು ಅವುಗಳ ನಿರ್ವಹಣೆಗೆ ನೀಡುವುದು ಅಗತ್ಯ.

ಏಕ ಶಿಕ್ಷಕ ಸರ್ಕಾರಿ ಶಾಲೆಗಳನ್ನು ಸಮೀಪದ ದೊಡ್ಡ ಶಾಲೆಗಳೊಂದಿಗೆ ವಿಲೀನಗೊಳಿಸುವ ಪ್ರಸ್ತಾಪದ ಬಗ್ಗೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ, ರಾಜ್ಯದ ಸಾವಿರಾರು ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲದಿರುವ ಸುದ್ದಿ ಪ್ರಕಟಗೊಂಡಿದೆ. ಬಯಲು ಶೌಚಾಲಯ ಪದ್ಧತಿಯನ್ನು ಕೊನೆಗೊಳಿಸಲು ದೇಶದೆಲ್ಲೆಡೆ ಶೌಚಾಲಯ ಕ್ರಾಂತಿ ಜಾರಿಯಲ್ಲಿರುವ ಸಂದರ್ಭದಲ್ಲಿಯೇ ಈ ಸುದ್ದಿ ಬಹಿರಂಗಗೊಂಡಿದೆ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಅಂಕಿಅಂಶಗಳ ಪ್ರಕಾರ ರಾಜ್ಯದ 6336 ಶಾಲೆಗಳಲ್ಲಿ ಹುಡುಗ ಹುಡುಗಿಯರಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ. ಈ ಹಿನ್ನೆಲೆಯಲ್ಲಿ ಒಂದು ತಿಂಗಳೊಳಗೆ ಶಾಲಾ ಮಕ್ಕಳಿಗೆ ಶೌಚಾಲಯಗಳನ್ನು ಒದಗಿಸುವಂತೆ ಕಳೆದ ಏಪ್ರಿಲ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ‘ಸರ್ವ ಶಿಕ್ಷಣ ಅಭಿಯಾನ’ದಿಂದ ಬರೆಯಲಾಗಿರುವ ಪತ್ರದಲ್ಲಿ, ‘ರಾಜ್ಯದ 2007 ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳಿಲ್ಲ. ಪ್ರಸ್ತುತ ರೂ.34.11 ಕೋಟಿ ವೆಚ್ಚದಲ್ಲಿ ರಾಜ್ಯದ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ ಕಾರ್ಯ ನಡೆದಿದೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಸಹಕಾರದೊಂದಿಗೆ ಈ ನಿರ್ಮಾಣ ನಡೆದಿದೆ’ ಎಂದು ತಿಳಿಸಲಾಗಿದೆ. ಕೇಂದ್ರ ಮತ್ತು ರಾಜ್ಯದ ಅಂಕಿಅಂಶಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಆದರೆ, ರಾಜ್ಯವೇ ಒಪ್ಪಿಕೊಂಡಂತೆ ಸಾವಿರಾರು ಶಾಲೆಗಳ ಮಕ್ಕಳು ಶೌಚಕ್ಕಾಗಿ ಬಯಲನ್ನು ಆಶ್ರಯಿಸಿರುವುದು ಘನತೆಯನ್ನು ಹೆಚ್ಚಿಸುವ ಸಂಗತಿಯೇನಲ್ಲ.


ಹುಡುಗರಿಗೆ ಹಾಗೂ ಹುಡುಗಿಯರಿಗೆ ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯಗಳಿರಬೇಕೆಂದು ಪ್ರಧಾನಿ ನರೇಂದ್ರ ಮೋದಿ ಮತ್ತೆ ಮತ್ತೆ ಹೇಳುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಕಳೆದ ನಾಲ್ಕು ವರ್ಷಗಳಿಂದ ‘ಸ್ವಚ್ಛ ಭಾರತ’ ಅಭಿಯಾನ ಚಾಲ್ತಿಯಲ್ಲಿದೆ. ಶೌಚಾಲಯಗಳ ಬಗ್ಗೆ ಅರಿವು ಮೂಡಿಸಬೇಕಾದ ಶಾಲೆಗಳಲ್ಲೇ ಮೂಲಭೂತ ಸೌಕರ್ಯಗಳ ಕೊರತೆಯಿರುವುದು ವ್ಯವಸ್ಥೆಯ ಹುಳುಕಿಗೆ ಹಿಡಿದಿರುವ ಕನ್ನಡಿಯಾಗಿದೆ. ಇದು ಕರ್ನಾಟಕಕ್ಕೆ ಸೀಮಿತವಾದ ಸಮಸ್ಯೆಯೇನೂ ಅಲ್ಲ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಎಲ್ಲ ರಾಜ್ಯಗಳಲ್ಲೂ ಸರ್ಕಾರಿ ಶಾಲೆಗಳದು ಇದೇ ಗತಿ. ಸರ್ಕಾರಿ ಶಾಲೆಗಳಿಗೆ ಮಕ್ಕಳು ಬೆನ್ನುಹಾಕುವುದಕ್ಕೆ ಶೌಚಾಲಯಗಳ ಕೊರತೆ ಕೂಡ ಒಂದು ಮುಖ್ಯ ಕಾರಣವಾಗಿದೆ.

ಶೌಚಾಲಯಗಳನ್ನು ನಿರ್ಮಿಸಿದರೆ ಸಾಲದು, ಅವುಗಳ ನಿರ್ವಹಣೆಯೂ ಮುಖ್ಯ. ಅನೇಕ ಶಾಲೆಗಳಲ್ಲಿ ಕುಡಿಯುವ ನೀರಿನ ಸವಲತ್ತೇ ಇಲ್ಲ. ಹೀಗಿರುವಾಗ ಶೌಚಾಲಯಕ್ಕೆ ನೀರು ಎಲ್ಲಿಂದ? ಕೆಲವು ಶಾಲೆಗಳಲ್ಲಿ ಶೌಚಾಲಯಗಳಿದ್ದರೂ ಅವುಗಳ ನಿರ್ವಹಣೆಯ ಗೊಡವೆಯೇ ಬೇಡವೆಂದು ಬೀಗ ಜಡಿದಿರುವುದೂ ಇದೆ. ಕೆಲವು ಶಾಲೆಗಳಲ್ಲಿ ನೂರಾರು ಮಕ್ಕಳಿಗೆ ಎರಡು ಮೂರು ಶೌಚಾಲಯಗಳು ಮಾತ್ರವಿರುತ್ತವೆ. ಅವುಗಳನ್ನು ಬಳಸಲು ವಿದ್ಯಾರ್ಥಿಗಳು ಪಾಳಿಯಲ್ಲಿ ನಿಲ್ಲುವ ಪರಿಸ್ಥಿತಿಯೂ ಇದೆ. ಇಂಥ ಸಂದರ್ಭದಲ್ಲಿ ಸ್ವಚ್ಛತೆಯನ್ನು ಕಾಪಾಡುವುದು ಅಸಾಧ್ಯ. ಬಾಗಿಲು ಇಲ್ಲದಿರುವ, ನಲ್ಲಿಗಳಿಲ್ಲದಿರುವ ಶೌಚಾಲಯಗಳೂ ಇವೆ. ಇಲ್ಲೆಲ್ಲ ಮಕ್ಕಳು ಬಯಲನ್ನೇ ಆಶ್ರಯಿಸಬೇಕು.

ಹೆಣ್ಣುಮಕ್ಕಳ ಪಾಡಂತೂ ದೇವರಿಗೇ ಪ್ರೀತಿ. ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಲಿಕ್ಕೆ ಶೌಚದ ಸಮಸ್ಯೆಯೂ ಒಂದು ಕಾರಣವಾಗಿದೆ. ನೂರಕ್ಕೆ 23ರಷ್ಟು ಹುಡುಗಿಯರು ಶಾಲೆ ಬಿಡಲಿಕ್ಕೆ ಶೌಚಾಲಯಗಳ ಕೊರತೆ ಕಾರಣವಾಗಿದೆ ಎನ್ನುವುದು ಅಧ್ಯಯನವೊಂದರ ಅಂದಾಜು. ಶಾಲಾ ಬಾಲಕಿಯರು ಮಾತ್ರವಲ್ಲ – ದೇಶದ ಸುಮಾರು ಆರೂವರೆ ಕೋಟಿ ಹೆಣ್ಣುಮಕ್ಕಳಿಗೆ ಸೂಕ್ತವಾದ ಶೌಚಾಲಯಗಳ ವ್ಯವಸ್ಥೆಯೇ ಇಲ್ಲ. ಶಾಲೆಗಳಲ್ಲಿನ ಶೌಚಾಲಯಗಳ ಬಗ್ಗೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ಆಕರ್ಷಕ ಅಂಕಿಅಂಶಗಳನ್ನು ನೀಡಿದ್ದಿದೆ. ಆದರೆ ಇವುಗಳು ಕಾಗದದ ಮೇಲಷ್ಟೇ ಇವೆ. ಶೌಚಾಲಯಗಳು ಕೂಡ ಭ್ರಷ್ಟರಿಗೆ ಕಾಸು ಮಾಡುವುದಕ್ಕೆ ಅವಕಾಶಗಳಾಗಿ ಪರಿಣಮಿಸಿವೆ.

ಪ್ರತಿ ವರ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೋಟ್ಯಂತರ ರೂಪಾಯಿಗಳನ್ನು ಶಾಲೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವುದಕ್ಕೆ ಖರ್ಚು ಮಾಡಲಾಗುತ್ತದೆ. ವಿವಿಧ ಯೋಜನೆಗಳಲ್ಲಿ ಶೌಚಾಲಯಗಳು ನಿರ್ಮಾಣವಾಗುತ್ತವೆ. ಆದರೆ, ಕೆಲವು ದಿನಗಳಲ್ಲೇ ನಿರ್ವಹಣೆಯ ಕೊರತೆಯಿಂದಾಗಿ ಅವು ಬಳಸಲು ಸಾಧ್ಯವಿಲ್ಲದ ಪರಿಸ್ಥಿತಿ ತಲುಪುತ್ತವೆ. ಶೌಚಾಲಯಗಳನ್ನು ನಿರ್ಮಿಸುವುದಕ್ಕೆ ನೀಡುವಷ್ಟೇ ಗಮನವನ್ನು ಅವುಗಳ ನಿರ್ವಹಣೆಗೆ ನೀಡುವುದೂ ಅಗತ್ಯ. ಶಾಲೆಗಳಲ್ಲಿ ಮೂಲಭೂತ ಸವಲತ್ತುಗಳು ಇರುವಂತೆ ನೋಡಿಕೊಳ್ಳುವುದು ಶಾಲಾಡಳಿತ ಹಾಗೂ ಸರ್ಕಾರದ ಕರ್ತವ್ಯ ಮಾತ್ರವಲ್ಲ; ಅದು ಪೋಷಕರ ಕರ್ತವ್ಯ ಕೂಡ. ತಮ್ಮ ಮಕ್ಕಳು ಹೋಗುವ ಶಾಲೆಗಳಲ್ಲಿ ಅವರ ಆರೋಗ್ಯಕ್ಕೆ ಪೂರಕವಾದ ಎಲ್ಲ ಸೌಕರ್ಯಗಳು ಇರುವಂತೆ ಬಯಸುವುದು ಹಾಗೂ ಒತ್ತಾಯಿಸುವುದು ಪೋಷಕರ ಹಕ್ಕು.

■ **ರಘುನಾಥ ಚ.ಹ.**



ಈಶ್ವರ್